## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 964**
**ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ**
**(ಪದವೀಧರರ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 24.07.2024**
**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಈ ಬಾರಿ ಉಂಟಾದ ಬರ ಪರಿಸ್ಥಿತಿಯಿಂದ ರೈತರಿಗೆ ಉಂಟಾದ ನಷ್ಟ ಎಷ್ಟು? | 2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆಯ ವೈಫಲ್ಯದ ಕಾರಣ, ಸರ್ಕಾರದ ಆದೇಶ ಸಂಖ್ಯೆ: ಕಂಇ 449 ಟಿಎನ್‌ಆರ್ 2023, ದಿನಾಂಕ:13.09.2023, 12.10.2023 ಮತ್ತು 04.11.2023ರ ಆದೇಶಗಳಲ್ಲಿ ಒಟ್ಟು 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ.<br><br>ಮುಂಗಾರು ಹಂಗಾಮಿನಲ್ಲಿ ಒಟ್ಟಾರೆಯಾಗಿ ಸುಮಾರು 48.178 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. |
| (ಆ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಷ್ಟು ಅನುದಾನವನ್ನು ಬರಪೀಡಿತ ಪ್ರದೇಶಗಳ ರೈತರಿಗೆ ಬಿಡುಗಡೆ ಮಾಡಿದೆ;<br><br>(ಇ) ಬರದಿಂದ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ; ಹಾಗಿದ್ದಲ್ಲಿ ಪಾವತಿಸಿದ ಪರಿಹಾರ ಧನದ ಒಟ್ಟು ಮೊತ್ತ ಎಷ್ಟು; | ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (NDRF) 2023ನೇ ಸಾಲಿನ ಮುಂಗಾರು (Kharif) ಬರ ಪರಿಹಾರಕ್ಕಾಗಿ ರೂ.3498.82 ಕೋಟಿಗಳನ್ನು ಮಂಜೂರು ಮಾಡಿ, ಈ ಪೈಕಿ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ದಿನಾಂಕ:01/04/2023ಕ್ಕೆ ಬಾಕಿ ಇದ್ದ ರೂ.89.20ಕೋಟಿಗಳಲ್ಲಿ ಶೇ.50ರಷ್ಟು ಅಂದರೆ ರೂ.44.60ಕೋಟಿಗಳನ್ನು ಪ್ರಾರಂಭಿಕ ಮೊತ್ತ ಎಂದು ಪರಿಗಣಿಸಿ ಇನ್ನುಳಿದ ಮೊತ್ತ ರೂ.3454.22ಕೋಟಿಗಳನ್ನು ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯವು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ. ಈ ಮೊತ್ತದಲ್ಲಿ ರೂ.3266.42 ಕೋಟಿಗಳು ಬೆಳೆಹಾನಿ ಪರಿಹಾರಕ್ಕಾಗಿ ಹಾಗೂ ರೂ.232.40 ಕೋಟಿಗಳು ಜೀವನೋಪಾಯ ಪರಿಹಾರಕ್ಕಾಗಿ (ಗ್ರಾಟಿಟುಯಸ್ ರಿಲೀಫ್) ಭಾರತ ಸರ್ಕಾರವು ಬಿಡುಗಡೆ ಮಾಡಿರುತ್ತದೆ.<br><br>ಬರ ಪರಿಹಾರಕ್ಕಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ: |

**(ರೂ. ಕೋಟಿಗಳಲ್ಲಿ)**

| ಕ್ರ.ಸಂ | ಉದ್ದೇಶ<br>2023-24 | |
|---|---|---|
| 1 | ಬೆಳೆ ಪರಿಹಾರಕ್ಕಾಗಿ (Input Subsidy) – ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ. | 636.44 |
| 2 | ತುರ್ತು ಬರ ಪರಿಹಾರದ ಪಾವತಿಗಾಗಿ - ಎಲ್ಲಾ 31 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ | 324.00 |
| 3 | ಕಿರು ಮೇವಿನ ಕಿಟ್‌ಗಳ ಖರೀದಿಗೆ- ಪಶುಸಂಗೋಪನೆ ಇಲಾಖೆ. | 40.00 |
| 4 | ಬೆಂಗಳೂರಿನ ನಾಗರೀಕರಿಗೆ ಕುಡಿಯುವ ನೀರು ಸರಬರಾಜು ಮಾಡಲು – ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ. | 15.00 |
| | **2024-25** | |
| 5 | ಜೀವನೋಪಾಯ ಪರಿಹಾರಕ್ಕಾಗಿ | 280.98 |
| | **ಒಟ್ಟು** | **1296.42** |

ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ನೀಡಬಹುದಾದ ಪರಿಹಾರದ ಬಗ್ಗೆ ಭಾರತ ಸರ್ಕಾರದ ಗೃಹ ಮಂತ್ರಾಲಯವು

ದಿನಾಂಕ:11.07.2023 ರಂದು ಹೊರಡಿಸಿರುವ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಪರಿಹಾರದ ಮೊತ್ತದಂತೆ 38,78,525 ಅರ್ಹ ರೈತ ಫಲಾನುಭವಿಗಳಿಗೆ ನಿಯಮಾನುಸಾರ ಅರ್ಹತೆಗನುಗುಣವಾಗಿ ರೂ.3535.30 ಕೋಟಿಗಳ ಬೆಳೆಹಾನಿ ಪರಿಹಾರ ಮೊತ್ತವನ್ನು ಆಧಾರ್ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಡಿ.ಬಿ.ಟಿ. ಮೂಲಕ ಪಾವತಿಸಲಾಗಿರುತ್ತದೆ.

(ಈ) ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ನಷ್ಟ ಎಷ್ಟು ಎಷ್ಟು ಮಂದಿ ರೈತರಿಗೆ ಪರಿಹಾರ ನೀಡಲಾಗಿದೆ ಬಿಡುಗಡೆ ಮಾಡಿದ, ವಿತರಿಸಿದ ಮತ್ತು ಪಾವತಿಸಲು ಬಾಕಿ ಇರುವ ಪರಿಹಾರ ಮೊತ್ತ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆನಷ್ಟ ಮತ್ತು ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಪರಿಹಾರ ಪಾವತಿಸಿದ ವಿವರ ಈ ಕೆಳಕಂಡಂತಿದೆ.

| ಜಿಲ್ಲೆ | ಬೆಳೆಹಾನಿ (ಹೆಕ್ಟೇರ್ ಗಳಲ್ಲಿ) | ಪರಿಹಾರ ಪಾವತಿಸಲಾದ ರೈತರ ಸಂಖ್ಯೆ | ಪರಿಹಾರ ವಿತರಿಸಿದ ಒಟ್ಟು ಮೊತ್ತ (ಕೋಟಿಗಳಲ್ಲಿ) |
|---|---|---|---|
| ಮಂಡ್ಯ | 48,548 | 115621 | 55.14 |
| ಮೈಸೂರು | 82660.8 | 142389 | 82.87 |
| ಚಾಮರಾಜ ನಗರ | 41625 | 57328 | 40.23 |
| ಹಾಸನ | 1,54,160 | 233718 | 139.56 |

ಸದರಿ 4 ಜಿಲ್ಲೆಗಳಲ್ಲಿ 549056 ಅರ್ಹ ರೈತ ಫಲಾನುಭವಿಗಳಿಗೆ ನಿಯಮಾನುಸಾರ ಅರ್ಹತೆಯನುಗುಣವಾಗಿ ರೂ.317.80ಕೋಟಿಗಳ ಬೆಳೆಹಾನಿ ಪರಿಹಾರವನ್ನು ವಿತರಿಸಲಾಗುತ್ತಿದ್ದು, ತಾಲ್ಲೂಕುವಾರು ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ.

(ಉ) ಸದರಿ ಜಿಲ್ಲೆಗಳಲ್ಲಿ ಕಳೆದ 15 ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ವಿತರಿಸಿದ ಪರಿಹಾರ ಮೊತ್ತ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಕಳೆದ 15 ತಿಂಗಳಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿಉಂಟಾದ ರೈತರ ಆತ್ಮಹತ್ಯೆ ಪ್ರಕರಣಗಳು ಹಾಗೂ ಪರಿಹಾರ ಪಾವತಿಸಲಾದ ವಿವರ ಈ ಕೆಳಕಂಡಂತಿದೆ.

| ಜಿಲ್ಲೆ | ದಾಖಲಾದ ಆತ್ಮಹತ್ಯೆ ಪ್ರಕರಣಗಳು | ಅರ್ಹ ಪ್ರಕರಣಗಳು | ವಿತರಿಸಲಾದ ಪರಿಹಾರ |
|---|---|---|---|
| ಮಂಡ್ಯ | 45 | 41 | ಎಲ್ಲಾ ಅರ್ಹ ಪ್ರಕರಣಗಳಿಗೆ ತಲಾ 5.00 ಲಕ್ಷದಂತೆ ಪರಿಹಾರ ವಿತರಿಸಿದೆ |
| ಮೈಸೂರು | 75 | 67 | |
| ಚಾಮರಾಜ ನಗರ | 02 | 01 | ಪರಿಹಾರ ವಿತರಿಸಲು ಕ್ರಮವಹಿಸಲಾಗುತ್ತಿದೆ |
| ಹಾಸನ | 48 | 43 | 35 ಪ್ರಕರಣಗಳಿಗೆ ತಲಾ 5.00 ಲಕ್ಷದಂತೆ ಪರಿಹಾರ ವಿತರಿಸಿದೆ. |

ಕಂಇ 339 ಟಿಎನ್ಆರ್ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

## ಚುಕ್ಕೆಗುರುತಿಲ್ಲದಪ್ರಶ್ನೆಸಂಖ್ಯೆ: 964ಕ್ಕೆ ಅನುಬಂಧ

| Sl.No. | District Name | Sl. No. | Taluk Name | Total Number Of Beneficiaries | Amount in Crore |
|---|---|---|---|---|---|
| 01 | Mandya | 01 | K.R.Pet | 31013 | 15.18 |
| | | 02 | Maddur | 16286 | 5.12 |
| | | 03 | Malavalli | 15588 | 6.79 |
| | | 04 | Mandya | 7112 | 2.91 |
| | | 05 | Nagmangala | 35105 | 20.99 |
| | | 06 | Pandavapura | 8836 | 3.67 |
| | | 07 | Srirangapatna | 1681 | 0.49 |
| | | **Mandya District Total** | | **115621** | **55.14** |
| 02 | Mysuru | 01 | Heggadadevankote | 17231 | 12.27 |
| | | 02 | Hunsur | 26213 | 17.24 |
| | | 03 | K.R.Nagar | 8103 | 3.10 |
| | | 04 | Mysuru | 11012 | 4.60 |
| | | 05 | Nanjangud | 13741 | 8.16 |
| | | 06 | Periyapatana | 37634 | 22.22 |
| | | 07 | Saligrama | 17294 | 8.08 |
| | | 08 | Saraguru | 8562 | 6.31 |
| | | 09 | T-Narsipur | 2599 | 0.90 |
| | | **Mysuru District Total** | | **142389** | **82.87** |
| 03 | Chamarajanagara | 01 | ChamarajaNagara | 19058 | 10.52 |
| | | 02 | Gundlupet | 23723 | 16.51 |
| | | 03 | Hanur | 11841 | 11.92 |
| | | 04 | Kollegala | 1612 | 0.86 |
| | | 05 | Yalandur | 1094 | 0.42 |
| | | **Chamarajanagara District Total** | | **57328** | **40.23** |

| | | | | | |
|---|---|---|---|---|---|
| 04 | Hassan | 01 | Alur | 12942 | 8.55 |
| | | 02 | Arkalgud | 30581 | 19.20 |
| | | 03 | Arsikere | 49511 | 32.43 |
| | | 04 | Belur | 22932 | 14.99 |
| | | 05 | Chanrayapatna | 43915 | 22.93 |
| | | 06 | Hassan | 44766 | 25.45 |
| | | 07 | Holenarasipura | 23288 | 13.77 |
| | | 08 | Sakleshpura | 5783 | 2.24 |
| | | **Hassan District Total** | | **233718** | **139.56** |
| **Total** | | | | **549056** | **317.80** |